ಹತ್ತಿರ ಮದಾಬಾದಲ್ಲಿ ವಿನಿಮಯಕೇಂದ್ರ ಹಾಕತಾ ಇದ್ವಿ. ಆಗೆಲ್ಲಾ ಕ್ರಾಸ್‌ಬಾರು ಮತ್ತೆ ಸ್ಟ್ರೌಜರು ಎಕ್ಸ್‌ಚೇಂಜುಗಳೇ. ನೀನು ನೋಡಿರ್ತೀಯೊ ಇಲ್ವೋ; ಚರ್ರ್ಚಟ್ ಚರ್ರ್ಚಟ್ ಅಂತಾ ಹಲ್ಲುಕಡೀತಾ ಹಂಟಿಂಗ್ ಸದ್ದು ಮಾಡತಾ ಜೀವಂತಿಕೆಯಿಂದ ಇರೋವು. ಈಗಿನ ಇಲೆಕ್ಟ್ರಾನಿಕ್ ಎಕ್ಸ್‌ಚೇಂಜುಗಳೋ ಬೇಟೆ ನುಂಗಿದ ಹೆಬ್ಬಾವಿನ ತರಾ ತಣ್ಣಗೆ, ಸದ್ದಿಲ್ಲದೇ ಸತ್ತಂತೆ ಬಿದ್ದಿರ್ತವೆ. ಇಲ್ನೋಡು ಈ ಫೋಟೊ ಕರಕ್ ಪಟ್ಟಣದ್ದು. ಮರುಭೂಮಿ; ಬರೀ ಒಣಮರಳು. ಗಾಳಿ ಬೀಸಿದ್ರೆ ಬಂದೂಕಿನಲ್ಲಿ ಚರೆ ತುಂಬಿಕೊಂಡು ಬಾರಿಸಿದಂತೆ ಬರುತ್ತಯ್ಯ ಮರಳಿನ ಕಣಾ!' ನೆನಪುಗಳನ್ನು ಚಪ್ಪರಿಸುತ್ತ ನಾಜೂಕಾಗಿ ಫೋಟೊಗಳನ್ನು ತಿರುವುತ್ತಲಿದ್ದರು ಮೆನನ್. '...ಇದು ನೋಡು, ಆಗ ತೋರಿಸಿದ್ನಲ್ಲ ಅವನ ಆಫೀಸು. ಎರಡು ತಿಂಗಳಾದಮೇಲೆ ಒಂದು ರಜೆದಿನ ಪಾರ್ಟಿಗೆ ಕರೆದಿದ್ದ. ನಾನು ಅಂದ್ರೆ ತುಂಬಾ ಮೆಚ್ಚುಗೆ ಹುಟ್ಟಿಬಿಟ್ಟಿತ್ತು ಅವನಿಗೆ. ಏನು ತೊಗೋತೀಯ ಮೆನನ್ ಅಂದದ್ದಕ್ಕೆ ನಾನು ಒಂದುಗ್ಲಾಸು ಹಾಲು ಅಂದೆ...' ಮೆನನ್ ಜೋರಾಗಿ ನಗುತ್ತ ಒಂದುಕ್ಷಣ ಕುಳಿತರು. ಮತ್ತೆ '...ಅದಕ್ಕೆ ಪಕಪಕ ನಗುತ್ತ ಏನಂದ ಗೊತ್ತಾ? ನೀನೇನು ಎಳೇಮಗೂನಾ ಅಥವಾ ಬೆಕ್ಕಿನಮರೀನಾ ಹಾಲು ಕುಡಿಯಕ್ಕೆ!... ಇದರಲ್ಲಿ ಯಾವ್ದು ಅಂತ ಕೇಳಿದ್ದು ಅಂತ ಸಾಲಾಗಿಟ್ಟ ಬಾಟಲುಗಳ್ನ ತೋರಿಸಿದ. ಕೈಯಾರೆ ಒತ್ತಾಯ ಮಾಡಿ ಕೊಟ್ಟ, ಸ್ಕಾಚು; ಸ್ಕಾಟ್‌ಲ್ಯಾಂಡಲ್ಲೆ ಏಜಾಗಿದ್ದು...' ಅನ್ನುವಾಗ ಮೆನನ್ ಗಂಟಲಲ್ಲಿ ಈಗಷ್ಟೇ ವ್ಹಿಸ್ಕಿ ಗುಟುಕು ಗುಟುಕಾಗಿ ಇಳಿಯುತ್ತಿದೆಯೋ ಎನ್ನುವ ಮಾದಕ ತನ್ಮಯತೆಯಲ್ಲಿದ್ದರು. 'ಇಲ್ಲಿ ಕೇಳು, ನಾಕು ವರ್ಷದಲ್ಲಿ ನಮ್ಮ ಕೆಲಸ ಮುಗಿದು ಭಾರತಕ್ಕೆ ಮರಳುವ ದಿನ ಬಂತು. ಅಲ್ಲಿಯ ಚೀಫ್, ಮೆನನ್ ನೀನು ನಮ್ಮಲ್ಲೆ ಇದ್ದುಬಿಡು ಅಂತ ಎಷ್ಟು ಒತ್ತಾಯ ಮಾಡಿದ ಗೊತ್ತಾ? ಆದರೆ ಭಾರತದಲ್ಲಿ ಇವಳ ಸಂಗಡ ನಂಗೆ ಮದುವೆ ಪ್ರಸ್ತಾಪವಾಗಿತ್ತಲ್ಲಾ...'

ಇದನ್ನ ಅಪಾರ್ಟ್‌ಮೆಂಟಿನವರೆಲ್ಲಾ ನೂರುಸಾರಿಯಾದರೂ ಕೇಳಿದ್ದರು. ಆದರೆ ಪ್ರತಿಸಾರಿಯೂ ಮೆನನ್ ಹೊಸದಾಗಿ ಹೇಳುವಂತೆ ಹೇಳುತ್ತಿದ್ದರು. ಈಗ ಅವರಿಗೆ ಎಂಬತ್ತು ವರ್ಷ. ಗತಕಾಲದ ಒಂದು ಸುಂದರ ತುಣುಕು ಯಾಕೋ ಆಪ್ತವಾಗಿಬಿಡುತ್ತದೆ; ಹೇಳಿಕೊಳ್ಳಬೇಕು ಅನಿಸುತ್ತದೆ. ಪಾಪ ಮೆನನ್ ಅಂಕಲ್ ಅಂತ ಅನಿಸುತ್ತಿತ್ತು ಅಕ್ಕಪಕ್ಕದವರಿಗೆ.

ರಾತ್ರಿ ಓಲಾಕ್ಯಾಬ್ ಬಂದಾಗ ಅರ್ಧ ಅಪಾರ್ಟ್‌ಮೆಂಟು ಕಳಿಸಲು ಕೆಳಗೆ ಬಂದಿತ್ತು. 'ಮೂರು ತಿಂಗಳ ನಂತರವೇ ಇನ್ನು ಭೆಟ್ಟಿ' ಅನ್ನುತ್ತ ಎಲ್ಲ ಕ್ಯಾಬ್‌ನಲ್ಲಿ ಕುಳಿತರು. ಪಾಸ್‌ಪೋರ್ಟು ವೀಸಾ ನೋಡ್ಕೊಂಬಿಡಿ ಲಗೇಜೆಲ್ಲ ಬಂತಾ? ಮಾತ್ರೆ ಔಷಧ ಹುಷಾರಿ ಹೋಗ್ಬನ್ನಿ ಹುಷಾರಿ... ನಾಕೂ ದಿಕ್ಕಿಂದ ಎಚ್ಚರಿಕೆ ಕಳಕಳಿ ಹರಿಯುತ್ತಿದ್ದಂತೆ ಕ್ಯಾಬ್ ಹೊರಟು ತಿರುವಿನಲ್ಲಿ ಮರೆಯಾಯಿತು. ಒಂದು ನಿಮಿಷ ಅಲ್ಲಿ ಮೌನ ಮನೆಮಾಡಿತು. ಬೊಕ್ಕತಲೆ, ದಪ್ಪನೆ ದೇಹದ ಮೆನನ್ ಅಂಕಲ್ ಗದ್ದಲ ಮಾಡುತ್ತ ನಿಧಾನವಾಗಿ ನಡೆಯುವ ದೃಶ್ಯ ನಾಳೆಯಿಂದ ಕಾಣುವುದಿಲ್ಲ.

ಸತ್ಯಭಾಮಾ ಇರುವುದು ಕ್ಯಾಲಿಫೋರ್ನಿಯಾವಾದರೆ ರುಕ್ಮಿಣಿಯದು ನಾರ್ತ್ ಕೆರೋಲಿನ. ಒಂದು ಅಮೆರಿಕದ ಪಶ್ಚಿಮವಾದರೆ ಇನ್ನೊಂದು ಪೂರ್ವ. ಮೊದಲು ರುಕ್ಮಿಣಿಯ ಮನೆಗೆ ಹೋಗುವುದು, ಸ್ವಲ್ಪ ಸಮಯ ನಂತರ ಸತ್ಯಭಾಮಾಳ ಮನೆಗೆ ಅಂತ ಮಾತಾಗಿತ್ತು. ಎರಡು ದಿನ ಜೆಟ್‌ಲಾಗಿನಿಂದ ಚೇತರಿಸಿಕೊಂಡು ಬೆಳಿಗ್ಗೆ ವಾಕಿಂಗ್ ಹೊರಟರು ಮೆನನ್. ಮನೆಯೆದುರು ಕಾಂಪೌಂಡು, ಬೇಲಿಯಿಲ್ಲ. ಮುಕ್ತ ಹುಲ್ಲುಹಾಸು. ಅದರಾಚೆ ದಾರಿಯಲ್ಲಿ ಜನ ಅಲ್ಲಲ್ಲಿ ಬೆಳಗಿನ ನಡೆದಾಟದಲ್ಲಿದ್ದರು. ನಿಧಾನವಾಗಿ ಒಂದಿಷ್ಟು ದೂರ ನಡೆದಾಡಿ ತಿರುಗಿ